**Order Sheet**
**In the Court Of: III Addl. CIVIL JUDGE AND JMFC BELAGAVI**
**AT BELGAUM**
**F.R.No:{f_r_no}**
**Case Reg.No: FDP/2/2001**

| **Petitioner** | V E R S U S | **Respondant** |
|---|---|---|

-------------------------------------------------------------------------------------------------------

| | |
|---|---|
| **1)Shri. Laxman Appayya Chalawadi** | **1)Smt. Shantavva wo. Shankar Chalawadi &21 others** |
| | **2)Smt. Annapurna w.o, vithal chalawadi,**<br>**3)Shri. Kalpana Do. Shankar Chalawadi,**<br>**4)Savita Do. Shankar Chalawadi,**<br>**5)Anjana Do. Shankar Chalawadi**<br>**6)Premanand So. Shankar Chalawadi**<br>**7)Shridevi Do Shankar Chalawadi**<br>**8)Smt. Pammavvwa wo. Vasu Chalawadi**<br>**9)Shri. Yallappa so. Vasu Chalawadi**<br>**10)Prasu So. Vasu Chalawadi**<br>**11)Shri. Bhomanna Punnappa Chalawadi**<br>**12)Kallappa Yallappa Chalawadi**<br>**13)Shri. Basu Yallappa Chalwadi**<br>**14)Kasturi wo. Anand Kamble**<br>**15)Surekha wo. Ningappa Kambale**<br>**16)Papul Basanne Mutagekar**<br>**17)Maruti Mallappa Manganonkar**<br>**18)Yallappa Bharamanna Pote**<br>**19)Anusaya Babu Ghodake**<br>**20)Madhu Babu Ghodake**<br>**21)Shri. Vijaya Babu Ghodake** |

**ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮಎಫಸಿ ನ್ಯಾಯಾಲಯ ಬೆಳಗಾವಿ**

**ಎಫ.ಡಿ.ಪಿ ನಂಃ 2-2001**
**ಆರ್. ಡಬ್ಲ್ಯೂ-1**

ದಿಃ 15-03-2017 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಿಂದ

ಯಲ್ಲಪ್ಪಾ ಲಕ್ಷ್ಮಣ ಚಲವಾದಿ ವಾದಿ ನಂ. 1 ಅರ್ಜಿಯ ಆದೇಶದ ಮೇರೆಗೆ ದಾವೆಯಲ್ಲಿ ಸೇರ್ಪಡೆಯಾಗಿರುತ್ತಾರೆ ಎಂದರೆ ನನಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ವಾದಿ ನಂ. 1 ಈ ದಾವೆಗೆ ಹೇಗೆ ಸೇರ್ಪಡೆ ಆಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಮೈತ ಅಪ್ಪಯ್ಯ ಚಲವಾದಿಯ ಹೆಂಡತಿ ರತ್ನವ್ವ ಎಂದರೆ ಸರಿ. ರತ್ನವ್ವ ಲಕ್ಷ್ಮಣ ಚಲವಾದಿ ಅರ್ಜಿಯ ಮೇರೆಗೆ ಯಲ್ಲಪ್ಪಾ ಲಕ್ಷ್ಮಣ ಚಲವಾದಿ ದಾವೆಗೆ ಸೇರ್ಪಡೆಯಾಗಿರುತ್ತಾರೆ ಎಂದರೆ ಸುಳ್ಳು. ರತ್ನವ್ವ ಹಾಕಿದ ಅರ್ಜಿಯ ಮೇರೆಗೆ ಯಲ್ಲಪ್ಪಾ ಲಕ್ಷ್ಮಣ ಚಲವಾದಿ ಈ ದಾವೆಗೆ ಸೇರ್ಪಡೆಯಾದ ಬಗ್ಗೆ ಆರ್ ಡಬ್ಲೂ 2 ಶಾಂತವ್ವ ಶಂಕರ ಚಲವಾದಿ ಮತ್ತು 2 ರಿಂದ 7 ಪ್ರತಿವಾದಿಯರು ಉಚ್ಚ ನ್ಯಾಯಾಲಯದಲ್ಲಿ ಆದೇಶದ ವಿರುದ್ಧ ಅರ್ಜಿ ಹೂಡಿರುತ್ತಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 17ನೇ ಪ್ಯಾರಾದಲ್ಲಿ ಹೇಳಿದ ಸಂಗತಿ ಉಚ್ಚ ನ್ಯಾಯಾಲಯಕ್ಕೆ ಶಾಂತವ್ವ ಶಂಕರ ಚಲವಾದಿ ಮತ್ತು 1 ರಿಂದ 7 ಪ್ರತಿವಾದಿಯರು ಅಪೀಲು ಮಾಡಿದ್ದರು ಎಂದು ಬರೆಸಿರುವುದಿಲ್ಲ. ನಾನು ಉಚ್ಚ ನ್ಯಾಯಾಲಯದಲ್ಲಿ ಅಪೀಲು ಮಾಡಿರುವ ವಿಷಯ ನನ್ನ ಸಾಕ್ಷಿ ಪ್ರಮಾಣ ಪತ್ರದ 17ನೇ ಪ್ಯಾರಾದಲ್ಲಿ ಬರೆಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಪ್ರಮಾಣ ಪತ್ರದ 17ನೇ ಪ್ಯಾರಾದಲ್ಲಿ ನಾನು ಉಚ್ಚ ನ್ಯಾಯಾಲಯಲ್ಲಿ ಅಪೀಲು ಮಾಡಿರುವ ವಿಷಯ ನಾನು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಉಚ್ಚ ನ್ಯಾಯಾಲಯಲ್ಲಿ ಅಪೀಲು ಮಾಡಿದ 2 ಅರ್ಜಿಗಳು ವಜಾಗೊಂಡಿರುತ್ತವೆ ಎಂದು ಅರ್ಜಿದಾರರ ಪರ ವಕೀಲರು ಪ್ರಶ್ನಿಸಿದಾಗ ಎದುರುಪರ ವಕೀಲರು ತಕರಾರು ಹೂಡಿದ್ದು, ಸದರಿ ವಜಾಗೊಂಡಿರುವ ದಾಖಲೆ ನ್ಯಾಯಾಲಯದ ಮುಂದೆ ಇರುವ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ ಸದರಿ ತಕರಾರನ್ನು ಎತ್ತಿ ಹಿಡಿಯಲಾಗಿರುತ್ತದೆ. ವಾದಿ ನಂ. 1 ಬಿ ಯಲ್ಲಪ್ಪಾ ಲಕ್ಷ್ಮಣ ಚಲವಾದಿ 2 ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ವಾರಸುದಾರನಲ್ಲ ಎಂದು ಉಲ್ಲೇಖಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಿ ನಂ. 1ಬಿ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ನಂ. 1ಬಿ ವಾರಸುದಾರನಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರತ್ನವ್ವಳಿಗೆ ನಾನು ಒಬ್ಬಳೇ ವಾರಸುದಾರಳೇಂದು ತೋರಿಸಲು ಯಾವುದೇ ಕಾಗದ ಪತ್ರಗಳು ಇರುವುದಿಲ್ಲ. ನಾನು ರತ್ನವ್ವನ ಮೊಮ್ಮಗಳು ಆಗಿರುವುದಿಲ್ಲ ಆದ ಕಾರಣ ವಾರಸಾ ಪ್ರಮಾಣ ಪತ್ರ ನೀಡಲಾಗುವುದಿಲ್ಲ ಎಂದು ತಹಶಿಲ್ದಾರರು ಸಿವಿಲ್ ನ್ಯಾಯಾಲಯದ ಮೊರೆ ಹೋಗಲು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಸಿವಿಲ್ ನ್ಯಾಯಲಯಕ್ಕೆ ವಾರಸುದಾರಳೇಂದು ನಾನು ಯಾವುದೇ ದಾವೆ ಹೂಡಿರುವುದಿಲ್ಲ. ಮುಲ ದಾವೆ ನಂ. 893-2010 ಪಾಲು ವಿಭಾಗ ದಾವೆಯನ್ನು ಹಿಂಪಡೆದೆವು ಎಂದರೆ ಸರಿ. ಕಾರಣ ಸದರಿ ದಾವೆಯ ಆಸ್ತಿಗಳು ಈ ದಾವೆಯಲ್ಲಿಯೂ ಸೇರ್ಪಡೆ ಆಗಿದ್ದ ಕಾರಣ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಯಾವ ಯಾವ ದಾವಾ ಆಸ್ತಿಗಳನ್ನು ಸೇರ್ಪಡಿಸಲಾಗಿರುತ್ತದೆ ಮತ್ತು ಅದರ ಪಂಚಾಯತ ನಂಬರ ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ ಎಂದರೆ ಸರಿ. ಯಲ್ಲಪ್ಪಾ ಲಕ್ಷ್ಮಣ ಚಲವಾದಿ ಮಚ್ಚಿ ಗ್ರಾಮದಲ್ಲಿ ಇರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಣ ಅಪ್ಪಯ್ಯಾ ಚಲವಾದಿಗೆ ರತ್ನವ್ವ ಒಬ್ಬಳೇ ವಾರಸುದಾರಳೇಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಪ್ಪಾ ಲಕ್ಷ್ಮಣ ಚಲವಾದಿ ಎಂಬ ವ್ಯಕ್ತಿ ಇರುವುದಿಲ್ಲ ಈತನ ಹೆಸರಿನಿಂದ ವಾರಸಾ 1ಬಿ ಅಂತಾ ವಾರಸಾ ಸೃಷ್ಟಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರತ್ನವ್ವಾಳ ವಾರಸುದಾರನಾದ ಯಲ್ಲಪ್ಪಾ ಲಕ್ಷ್ಮಣ ಚಲವಾದಿ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಯಲ್ಲಪ್ಪಾ ಲಕ್ಷ್ಮಣ ಚಲವಾದಿ ವಾರಸುದಾರ ಅಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ಚಲವಾದಿ ಮನೆತನಕ್ಕೆ ಸಂಬಂಧ ಇರುವುದಿಲ್ಲ ಆದಕಾರಣ ಯಲ್ಲಪ್ಪಾ ಲಕ್ಷ್ಮಣ ಚಲವಾದಿ ವಾರಸುದಾರನಲ್ಲ ಎನ್ನುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಅಪ್ಪಯ್ಯ ಚಲವಾದಿಗೆ 5 ಜನ ಗಂಡು ಮಕ್ಕಳಿರುತ್ತಾರೆ ಎಂದು ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸಿರುವುದಿಲ್ಲ. ಯಲ್ಲಪ್ಪಾ ಲಕ್ಷ್ಮಣ ಚಲವಾದಿ, ವಾದಿ ನಂ. 1ಬಿ ರವರಿಗಷ್ಟೇ ತನ್ನ ಪಾಲು ದೊರಕುವ ಅಧಿಕಾರ ಹೊಂದಿರುತ್ತಾನೆ ನನಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂ. 22 ಮತ್ತು 23 ರಲ್ಲಿ ಖೊಟ್ಟಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಮೈತ ಲಕ್ಷ್ಮಣ ಅಪ್ಪಯ್ಯ ಚಲವಾದಿ ಮತ್ತು ರತ್ನವ್ವ ಚಲವಾದಿ ಬದುಕಿರುವಾಗ ನಾನು ಯಾವುದೇ ದಾವೇ ಹೂಡಿರುವುದಿಲ್ಲ ಮತ್ತು ಈ ದಾವೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ ಎಂದರೆ ಸರಿ. ವಾದಿ ನಂ. 1ಬಿ

ಯಲ್ಲಪ್ಪಾ ಲಕ್ಷ್ಮಣ ಚಲವಾದಿರವರಿಗೆ ಆಸ್ತಿ ವಾರಸುದಾರನಾಗಿ ಹೋಗುತ್ತದೆ ಸದರಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ವಾರಸುದಾರಳೇಂದು ತಕರಾರನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

-ಸಹಿ-

3ನೇ ಅಧಿಕ ಸಿವಿಲ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಧೀಶರು,

ಬೆಳಗಾವಿ.